| Sl. No. | Name of the Equipment | Qty. | Installed, Commissioned & Working Satisfactory |
|---|---|---|---|
| 16. | Stretcher on Trolley | 3 | Being Used |
| 17. | Examination Table | 3 | Being Used |
| 18. | Bedside Screen | 10 | Being Used |
| 19. | Doctors Table | 3 | Being Used |
| 20. | Bedside Locker | 50 | Being Used |
| 21. | Revloving Stool | 10 | Being Used |

**ಉಡುಪಿ ಜಿಲ್ಲೆಯಲ್ಲಿ ಆಶ್ರಯ ಮನೆಗಳ ಬಿಡುಗಡೆಗೆ ಬಾಕಿ ಇರುವ ಅನುದಾನ**

3541(3334) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ 1998–99ನೇ ಸಾಲಿನ ಆಶ್ರಯ ಮನೆ ಮಂಜೂರಾತಿಗೆ ಹಣ ಬಿಡುಗಡೆ ಮಾಡಲು ಬಾಕಿ ಇರುವುದು ಗಮನಕ್ಕೆ ಬಂದಿದೆಯೇ ;

ಆ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ 1998–99ನೇ ಸಾಲಿನಲ್ಲಿ ಎಷ್ಟು ಆಶ್ರಯ ಮನೆಗಳಿಗೆ ಹಣ ಬಿಡುಗಡೆಗೆ ಬಾಕಿ ಇದೆ; ಎಷ್ಟು ಫಲಾನುಭವಿಗಳಿಗೆ ಹಣ ಪಾವತಿ ಬಾಕಿ ಇದೆ ; ಯಾವಾಗ ಬಿಡುಗಡೆ ಮಾಡಲಾಗುವುದು ;

ಇ) ಸಕಾಲದಲ್ಲಿ ಹಣ ಬಿಡುಗಡೆ ಮಾಡದೇ ಇರುವುದರಿಂದ ಫಲಾನುಭವಿಗಳು ಕಷ್ಟ ಅನುಭವಿಸಿ ಸರ್ಕಾರದ ಜನಪ್ರಿಯ ಯೋಜನೆಗಳಿಂದ ವಂಚಿತರಾಗಿ ಸಾಲಕ್ಕೆ ಮೊರೆ ಹೋಗುವ ಪರಿಸ್ಥಿತಿ ಉಂಟಾಗುವುದಿಲ್ಲವೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಹೌದು

ಆ) 102 ಆಶ್ರಯ ಫಲಾನುಭವಿಗಳಿಗೆ ಹಣ ಪಾವತಿಸಬೇಕಾಗಿರುತ್ತದೆ.

ಈ 102 ಮನೆಗಳು, ವಿವಿಧ ಹಂತದ ಪ್ರಗತಿಯಲ್ಲಿವೆ. ಪ್ರತಿಯೊಂದು ಮನೆಯ ಪ್ರಗತಿಯನ್ನು ದಾಖಲಿಸಿ ಸಂಬಂಧಿಸಿದ ಫಲಾನುಭವಿಗಳಿಗೆ ಹಣ ನೀಡಲು ಅನುಕೂಲವಾಗುವಂತೆ, 1998–99ನೇ ಶ್ರೇಣಿಯ ಎಲ್ಲ ಮನೆಗಳಿಗೆ ಸಂಪೂರ್ಣ ಹಣವನ್ನು ಜಿಲ್ಲಾ ಪಂಚಾಯತ್, ಉಡುಪಿ ಇವರಿಗೆ ಈಗಾಗಲೇ ಬಿಡುಗಡೆ ಮಾಡಿದೆ

ಇ) ಉದ್ಭವಿಸುವುದಿಲ್ಲ.

**ಕುಂದಾಪುರ ಸಾರ್ವಜನಿಕ ಆಸ್ಪತ್ರೆಯನ್ನು, ಜಿಲ್ಲಾ ಪಂಚಾಯತ್‌ನಿಂದ ರಾಜ್ಯ ವಲಯಕ್ಕೆ ವರ್ಗಾಯಿಸುವುದು**

3542(3335) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ಸಾರ್ವಜನಿಕ ಆಸ್ಪತ್ರೆ ಕೆ.ಹೆಚ್.ಎಸ್.ಡಿ.ಪಿ. ಯೋಜನೆಯಡಿ 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಿ, ಉಪ ವಿಭಾಗೀಯ ಮಟ್ಟದ ಆಸ್ಪತ್ರೆ ಎಂದು ಗುರುತಿಸಿ, ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದ ಸದರಿ ಆಸ್ಪತ್ರೆಯನ್ನು ಜಿಲ್ಲಾ ಪಂಚಾಯತ್‌ನಿಂದ 1.4.2003 ರಿಂದ ರಾಜ್ಯ ವಲಯಕ್ಕೆ ವರ್ಗಾಯಿಸಲಾಗುವುದೆಂದು ತಿಳಿಸಿ ಇದುವರೆಗೂ ವರ್ಗಾಯಿಸದೇ ಇರಲು ಕಾರಣವೇನು ;

ಆ) ಹಾಗಿದ್ದಲ್ಲಿ, ಯಾವಾಗ ವರ್ಗಾಯಿಸುವ ಆದೇಶ ಹೊರಡಿಸಲಾಗುವುದು ;

ಇ) ರಾಜ್ಯ ವಲಯಕ್ಕೆ ವರ್ಗಾಯಿಸುವಾಗ ವಿಭಾಗೀಯ ಮಟ್ಟದ ಸದರಿ ಆಸ್ಪತ್ರೆಗೆ ಬೇಕಾದ ಶುಶ್ರೂಷಕಿಯರ ಹಾಗೂ ಇನ್ನಿತರ ಅವಶ್ಯ ಹುದ್ದೆಗಳನ್ನು ಮಂಜೂರು ಮಾಡಲಾಗುವುದೇ ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರದ ಆದೇಶ ಸಂ: ಹೆಚ್.ಎಫ್.ಡಬ್ಲ್ಯೂ (ಪಿಆರ್) 142 ಡಬ್ಲ್ಯೂಬಿಎ 2002 ದಿನಾಂಕ: 15-03-2003ರಲ್ಲಿ ಈ ಆಸ್ಪತ್ರೆಯನ್ನು ರಾಜ್ಯ ವಲಯಕ್ಕೆ ವರ್ಗಾಯಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ನೂರು ಹಾಸಿಗೆಗಳ ಆಸ್ಪತ್ರೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಮಂಜೂರು ಮಾಡಲು ನಾರ್ಮ್ಸ್‌ರನ್ವಯ ಕ್ರಮಕೈಗೊಳ್ಳಲಾಗುವುದು.

**ಉಡುಪಿ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ವರ್ಗಾವಣೆ**

3543(3336) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯು ಅಸ್ತಿತ್ವಕ್ಕೆ ಬಂದ ಕಳೆದ 3 ವರ್ಷಗಳಲ್ಲಿ ಎಷ್ಟು ಜನ ಉಪ ನಿರ್ದೇಶಕರನ್ನು ಬದಲಾಯಿಸಿ ವರ್ಗಾವಣೆ ಮಾಡಲಾಗಿದೆ ;

ಆ) ಎಷ್ಟು ಜನ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಉಪ ನಿರ್ದೇಶಕರ ಪ್ರಭಾರದಲ್ಲಿ ಇರಿಸಲಾಗಿದೆ ;

ಇ) ರೆಗ್ಯುಲರ್ ಉಪನಿರ್ದೇಶಕರು ಮತ್ತು ಪ್ರಭಾರದಲ್ಲಿದ್ದ ಉಪ ನಿರ್ದೇಶಕರ ಅವಧಿಗಳು ಎಷ್ಟು ; ಅವರ ಹೆಸರೇನು ;

ಈ) ಈ ರೀತಿ ಪದೇ ಪದೇ ಬದಲಾಯಿಸಲು ಕಾರಣವೇನು ;

ಉ) ಇದರಿಂದ ಅಧಿಕಾರಿಗಳ ಅಡಳಿತ ಸ್ಥೈರ್ಯ ಕುಸಿಯುವುದಿಲ್ಲವೇ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 5 ಉಪನಿರ್ದೇಶಕರುಗಳನ್ನು ವರ್ಗಾವಣೆ ಮಾಡಲಾಗಿದೆ.

ಆ) ಇಬ್ಬರು ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಪ್ರಭಾರದಲ್ಲಿ ಇರಿಸಲಾಗಿದೆ.

ಇ)

| | ಉಪನಿರ್ದೇಶಕರ ಹೆಸರು | ಅವಧಿ |
|---|---|---|
| 1. | ಶಂಕರನಾರಾಯಣಭಟ್ | 1.7.1998ರಿಂದ 22.7.2000 |
| 2. | ಎಸ್.ಕೆ. ಕಲ್ಲಯ್ಯನವರ್ | 7.12.2000 ರಿಂದ 18.1.2001 |
| 3. | ಎಸ್. ಸೂರ್ಯನಾರಾಯಣ | 19.1.2001 ರಿಂದ 4.6.2001 |
| 4. | ಡಯಾನ ಎಫ್. ಪ್ರಭು | 15.6.2001 ರಿಂದ 16.4.2002 |
| 5. | ಕೆ. ರಾಜನ್ | 17.4.2002 ರಿಂದ 7.12.2002 |